**MVC-1618/2024** **ಪಿ.ಡಬ್ಲ್ಯೂ-1 (ಹೇಮ)**

ದಿನಾಂಕಃ **11.08.2026** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 3 ನೇ ಎದುರುದಾರರ ಪರ ಶ್ರೀ. ಎಸ್.ಜೆ.ಡಿ. ವಕೀಲರಿಂದಃ**

ಪ್ರಸ್ತುತ ಏನು ಕೆಲಸ ಮಾಡುತ್ತಿಲ್ಲ. 1 ನೇ ಎದುರುದಾರರು ನನಗೆ ಪರಿಯಸ್ಥರು ಎಂದರೆ ಸರಿಯಲ್ಲ. ದೂರಿನಲ್ಲಿ ಏನು ಬರೆದಿದೆ ಎಂದು ಕೇಳಿ ತಿಳಿದುಕೊಂಡಿರುತ್ತೇನೆ. ಆಸ್ಪತ್ರೆಯಲ್ಲಿದ್ದ ಕಾರಣ ದೂರನ್ನು ತಡವಾಗಿ ನೀಡಲಾಗಿರುತ್ತದೆ. ಎಲ್ಲೋ ಬಿದ್ದು ಆದ ಗಾಯಗಳನ್ನು ದುರುಪಯೋಗಪಡಿಸಿಕೊಂಡು ಪರಿಹಾರ ಪಡೆಯುವ ಸಲುವಾಗಿ 3 ದಿನ ತಡವಾಗಿ ದೂರನ್ನು ನೀಡಲಾಗಿದೆ ಎಂದರೆ ಸರಿಯಲ್ಲ. ಶ್ರೀರಂಗಪಟ್ಟಣ-ಬನ್ನೂರು ಮುಖ್ಯ ರಸ್ತೆಯ ಮಧ್ಯ ಭಾಗದಲ್ಲಿ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತ ನಡೆದಾಗ ಕತ್ತಲಾಗಿತ್ತು. ನಾನು ರಸ್ತೆ ದಾಟುವಾಗ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ದಾಟಿದ ನಂತರ ಆಗಿರುತ್ತದೆ. ಸ್ಪಂದನಾ ಆಸ್ಪತ್ರೆಯಲ್ಲಿ ವೈದ್ಯರಾದ ಅವಿನಾಶ್ ರವರು ಚಿಕಿತ್ಸೆ ನೀಡಿರುತ್ತಾರೆ. ನಾನು ಶಸ್ತ್ರ ಚಿಕಿತ್ಸೆಗೆ ಒಳಗಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ9 ರಂತೆ ದಿನಾಂಕ 21.09.2024 ರಂದು ಆಸ್ಪತ್ರೆಗೆ ದಾಖಲಾಗಿರುತ್ತದೆ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿ 20.09.2024 ರಂದು ಆಸ್ಪತ್ರೆಗೆ ಹೋಗಿರುತ್ತೇವೆ 21.09.2024 ರಂದು ಶಸ್ತ್ರ ಚಿಕಿತ್ಸೆಯಾಗಿರುತ್ತದೆ ಎಂದು ನುಡಿಯುತ್ತಾರೆ. ದಿನಾಂಕ 21.09.2024 ರಂದು ಅಪಘಾತದಿಂದಾದ ಗಾಯಗಳಿಗೆ ದಾಖಲಾಗಿ ಚಿಕಿತ್ಸೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರ ಸುಮಾರು 25-30 ಬಾರಿ ಹೊರರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಈ ಕುರಿತು ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಈಗ್ಗೆ ಮೂರು ತಿಂಗಳ ಹಿಂದೆ ಆಸ್ಪತ್ರೆಗೆ ಹೋಗಿ ಕಡೆಯ ಬಾರಿ ಚಿಕಿತ್ಸೆ ಪಡೆದಿರುತ್ತೇನೆ. ಈ ಕುರಿತು ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಈ ಕುರಿತು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ಪರಿಹಾರ ಪಡೆಯುವ ಸಲುವಾಗಿ ನಿಪಿ7 ಮತ್ತು 8 ಅನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಮುಂದುವರೆದ ವೈದ್ಯಕೀಯ ಖರ್ಚು, ಓಡಾಟದ ಖರ್ಚು ಇತ್ಯಾದಿಗಳನ್ನು ದಾಖಲೆಗಳನ್ನು ಹಾಜರುಪಡಿಸದೇ ಸುಳ್ಳಾಗಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ತಿಂಗಳಿಗೆ ನಲವತ್ತು ಸಾವಿರ ಆದಾಯ ಗಳಿಸುತ್ತಿದ್ದೆ ಎಂದು ತೋರಿಸುವ ದಾಖಲೆಯನ್ನು ಹಾಜರುಪಡಿಸಿಲ್ಲ. ಮೊದಲಿನಂತೆ ಈಗಲೂ ಎಲ್ಲಾ ಕೆಲಸಗಳನ್ನು ಮಾಡಿಕೊಂಡು ಬರುತ್ತಿದ್ದೇನೆ ಮತ್ತು ಯಾವುದೇ ಅಪಘಾತದ ನ್ಯೂನ್ಯತೆಯಿಂದ ಬಳಲುತ್ತಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ಈ ಕುರಿತು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಉಳಿದ ಎದುರುದಾರರ ಪರ ಪಾಟೀ ಸವಾಲು ಇಲ್ಲಎಂದು ತೆಗೆದುಕೊಳ್ಳಲಾಯಿತು. )

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

**1 ನೇ ಅಪರ ಹಿರಿಯ ಸಿಜೆ ಮತ್ತು**
**ಎಂ.ಎ.ಸಿ.ಟಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**